ಇ) ಮಂಜೂರಾದ ಕೊಳವೆಬಾವಿಗಳಲ್ಲಿ ಕೊರೆಯದೇ ಇರುವ ಕೊಳವೆಬಾವಿಗಳ ಸಂಖ್ಯೆ 104

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ನೀರಿನ ಅಂತರ್ಜಲ ಮಟ್ಟ ತೀರಾ ಕುಸಿದಿದ್ದು, ಕನಿಷ್ಟ ಆಳ 800 ರಿಂದ 900 ಅಡಿಗಳವರೆಗೆ ಕೊಳವೆಬಾವಿಯನ್ನು ಕೊರೆಯಬೇಕಾಗಿರುತ್ತದೆ ಹಾಗೂ ಅಳವಡಿಸಬೇಕಾದ ಕೇಸಿಂಗ್ ಪೈಪಿನ ಉದ್ದ ಹೆಚ್ಚಾಗಿರುತ್ತದೆ ಈ ಹಿನ್ನಲೆಯಲ್ಲಿ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿ ನಿಗದಿಪಡಿಸಿದ ರೂ 86,000/– ಸಹಾಯಧನದ ಮಿತಿಯಲ್ಲಿ ಕೊಳವೆಬಾವಿ ಕೊರೆದು, ಪಂಪ್ ಆಳವಡಿಸಿ, ವಿದ್ಯುದ್ದೀಕರಣಗೊಳಿಸಲು ಹಣ ಸಾಕಾಗುತ್ತಿಲ್ಲ ಸಹಾಯಧನಕ್ಕಿಂತ ಹೆಚ್ಚುವರಿ ಹಣವನ್ನು ಭರಿಸಲು ಹೆಚ್ಚಿನ ಫಲಾನುಭವಿಗಳು ಮುಂದೆ ಬಾರದ ಪ್ರಯುಕ್ತ ಪ್ರಗತಿ ಕುಂಠಿತವಾಗಿರುತ್ತದೆ

ಈ) ಪ್ರಶ್ನೆ (ಇ) ಗೆ ನೀಡಿದ ಉತ್ತರದಲ್ಲಿನ ಕಾರಣಗಳಿಂದಾಗಿ ಪ್ರಗತಿ ಕುಂಠಿತಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಕೊಳವೆಬಾವಿ ಕೊರೆಯಲು ಹಣವನ್ನು ನೇರವಾಗಿ ಫಲಾನುಭವಿಗಳಿಗೆ ನೀಡುವುದು

694 (1015) ಶ್ರೀ ವೆಂಕಟಮುನಿಯಪ್ಪ ಬಿ ಪಿ – ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯುವ ಕೊಳವೆ ಬಾವಿಗಳಿಗೆ ನೀಡುವ ಒಂದು ಲಕ್ಷ ರೂ ಗಳನ್ನು ಏಜೆನ್ಸಿಗಳಿಗೆ ನೀಡುವ ಬದಲಾಗಿ ನೇರವಾಗಿ ಫಲಾನುಭವಿಗಳಿಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ, ಸರ್ಕಾರ ಈ ಪ್ರಸ್ತಾವನೆಯನ್ನು ಯಾವಾಗ ಜಾರಿಗೆ ತರುವುದು ,

ಇ) ಇಲ್ಲದಿದ್ದಲ್ಲಿ ಈಗಿರುವ ವ್ಯವಸ್ಥೆಗೆ ಪರ್ಯಾಯವಾಗಿ ಬೇರೆ ವಿಧಾನವನ್ನು ಅನುಸರಿಸಿ ಫಲಾನುಭವಿಗಳಿಗೆ ತ್ವರಿತವಾಗಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆಬಾವಿ ಘಟಕ ವೆಚ್ಚ ರೂ 1 00 ಲಕ್ಷವೆಂದು ನಿಗದಿಪಡಿಸಲಾಗಿದೆ ಇದರ ಪೈಕಿ 86,000/ – ರೂ ಗಳು ಫಲಾನುಭವಿಗಳಿಗೆ ಸಹಾಯಧನ ರೂಪದಲ್ಲಿದ್ದು, ಉಳಿದ ಹಣವು ಅವಧಿ ಸಾಲ ರೂಪದಲ್ಲಿರುತ್ತದೆ ಫಲಾನುಭವಿಗಳಿಗೆ ಈ ಯೋಜನೆಯಡಿ ನೇರವಾಗಿ ಹಣ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಆ) ಅಂತಿಮ ನಿರ್ಧಾರವಾಗಿರುವುದಿಲ್ಲ

ಇ) ಹಣವನ್ನು ನೇರವಾಗಿ ಫಲಾನುಭವಿಗಳಿಗೆ ನೀಡುವ ಕುರಿತಾದ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ